**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ.**

**ಸಿ.ಸಿ.ಃ 6/2018**

ಪಿ.ಡಬ್ಲೂ: **7, ಸಿ.ಡಬ್ಲ್ಯೂಃ 5**

**ಸಾಕ್ಷಿದಾರರ ಹೆಸರು** ಃ ಮಂಜುನಾಥ ಪೂಜಾರಿ
**ತಂದೆಯ ಹೆಸರು** ಃ ರಾಮ ಪೂಜಾರಿ
**ವಯಸ್ಸು** ಃ **38** ವರ್ಷ
**ಉದ್ಯೋಗ** ಃ ಕೂಲಿ
**ವಾಸಸ್ಥಳ** ಃ ಬೈಕಾಡಿ, ಉಡುಪಿ

**ದಿಃ 28.11.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾ** ಯಿತು.

**ಮುಖ್ಯ ವಿಚಾರಣೆಃ ಮಾನ್ಯ** ವಿಶೇಷ **ಅಭಿಯೋಜಕರಿಂದಃ**

ಸಾಕ್ಷಿಗೆ ದಿಃ **31.12.2012** ರ ಸೊತ್ತು ಸ್ವಾಧೀನತಾ ಮಹಜರನ್ನು ತೋರಿಸಿದಾಗ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು ಕಾರಣ, ಸದ್ರಿ ದಾಖಲೆಯನ್ನು ನಿ.ಪಿ-**6** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**6**(ಎ) ಎಂದು ಗುರುತಿಸಲಾಯಿತು. ಸುಮಾರು **6** ವರ್ಷದ ಹಿಂದೆ ಮಣಿಪಾಲದ ಒಂದು ಕಾಂಪ್ಲೆಕ್ಸ್ ಎದುರಿಗೆ ಪೋಲೀಸರು ಒಂದು ಕಾರನ್ನು ಸ್ವಾಧೀನ ಪಡಿಸುವಾಗ ನಾನು ಮೇಲೆ ಹೇಳಿದ ದಾಖಲೆಗೆ ಸಹಿ ಮಾಡಿರುತ್ತೇನೆ. ಸದ್ರಿ ಕಾರನ್ನು ತೋರಿಸಲು ಆರೋಪಿ ನಿತ್ಯಾನಂದ ನನ್ನನ್ನು ಮತ್ತು ಪೋಲೀಸರನ್ನು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಕಾರಿನ ಒಳಗಡೆ ಇದ್ದ ಒಂದು ಕಬ್ಬಿಣದ ರಾಡನ್ನು ಸಹಾ ಪೋಲೀಸರು ವಶಕ್ಕೆ ಪಡೆದಿರುತ್ತಾರೆ. ಸದ್ರಿ ಕಾರು ಮತ್ತು ರಾಡನ್ನು ನೋಡಿದರೆ ಗುರುತಿಸುತ್ತೇನೆ. ಮೇಲೆ ಹೇಳಿದ ದಾಖಲೆಗೆ ಸಹಿ ಮಾಡುವ ಸಂದರ್ಭದಲ್ಲಿ ಮತ್ತು ಮೇಲೆ ಹೇಳಿದ ವಸ್ತುಗಳನ್ನು ವಶಪಡಿಸಿಕೊಳ್ಳುವಾಗ ಚಾ.ಸಾ-**6** ರವರು ಹಾಜರಿದ್ದರು.

ಸಾಕ್ಷ್ಯ ಅಧಿನಿಯಮ **299** ರಂತೆ ಸಾಕ್ಷ್ಯ ವಿಚಾರಣೆಃ

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾ** ಯಿತು)

**ಓ ಹೇ ಕೇ ಸ ಇದೆ ಎಂದು ಒಪ್ಪಿದರು**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎ.ಸಿ.ಜೆ.ಎಮ್, ಉಡುಪಿ.**